ತೆರವು ಮಾಡಿಕೊಡಬೇಕೆಂದು ವಿನಂತಿಸಿಕೊಂಡಿದ್ದು ಅದರಂತೆ ಅಡಿಗೆ ಕೋಣೆ ಮತ್ತು ಗಾರ್ಮೆಂಟರಿಯನ್ನು ಈಗ ಕೊಟ್ಟಿದ್ದಾರೆ, ಇನ್ನು ಎರಡು ತಿಂಗಳಲ್ಲಿ ಮತ್ತೆ ನಮಗೆ ಕಟ್ಟಡವನ್ನು ಬಿಟ್ಟುಕೊಡುತ್ತೇವೆಂದು ಹೇಳಿದ್ದಾರೆ. ಜೂನ್ ತಿಂಗಳಲ್ಲಿ ಅದರ ಬಗೆ ವ್ಯವಹಾರ ನಡೆಸಲಾಗಿದೆ.

ಶ್ರೀ ಜ್ಞಾನದೇವ ದೊಡ್ಡಮೇಟಿ. ಮಾನ್ಯ ಮಂತ್ರಿಗಳು ಉತ್ತರದಲ್ಲಿ ಬಾಲಕಿಯರ ಪ್ರೌಢ ಶಾಲೆಯನ್ನು ನಡೆಸಲು ಕೇವಲ 6 ತಿಂಗಳಿಗೋಸ್ಕರ ಕೊಟ್ಟಿದ್ದೇವೆ ಎಂದು ತಿಳಿಸಿದ್ದಾರೆ. 6 ತಿಂಗಳು ಎಂದರೆ ಒಂದೂವರೆ ವರ್ಷ ಎಂದರ್ಥವೆ ?

ಶ್ರೀಮತಿ ಚಂದ್ರಪ್ರಭ ಅರಸು.—ಕೆಲವು ಭಾಗ ಬಿಡಿಸಿಕೊಂಡಿದ್ದೇವೆ. ಉಳಿದ ಭಾಗವನ್ನು ಇನ್ನು ಎರಡು ತಿಂಗಳಲ್ಲಿ ಬಿಡಿಸಿಕೊಂಡು ಯಾವರೀತಿ ಉಪಯೋಗ ಮಾಡಿಕೊಳ್ಳಬೇಕೋ ಮಾಡಿಕೊಳ್ಳುತ್ತೇವೆ. ಕೈಗಾರಿಕಾ ಘಟಕವನ್ನು ಅಲ್ಲಿ ಹಾಕಬೇಕೆಂಬ ಆಲೋಚನೆ ಇದೆ.

ಶ್ರೀ ಮುತ್ತಿನ ಪೆಂಡಿಮಠ.—ರಿಮ್ಯಾಂಡ್ ಹೋಂಗಳನ್ನು 1980ನೇ ಇಸವಿಯಲ್ಲಿ ಸರ್ಕಾರ ವಶಪಡಿಸಿಕೊಂಡಿತು. ಸರ್ಕಾರ ವಶಪಡಿಸಿಕೊಂಡಮೇಲೆ ಅಲ್ಲಿದ್ದಂಥ ಖಾಸಗಿ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಗಿದೆಯೆ ? ಹಾಗೆ ಪರಿಗಣಿಸಿದ್ದರೆ ಅವರಿಗೆ ಸರ್ಕಾರಿ ನೌಕರರಂತೆ ವೇತನ ಶ್ರೇಣಿಯನ್ನು ನಿಗದಿ ಪಡಿಸಲಾಗಿದೆಯೆ ? ನಿಗದಿಪಡಿಸಿದ್ದಿದ್ದರೆ ಮೂರು ವರ್ಷ ವಿಳಂಬ ಮಾಡಿರುವುದಕ್ಕೆ ಕಾರಣವೇನು ?

ಶ್ರೀಮತಿ ಚಂದ್ರಪ್ರಭ ಅರಸು.—ಏನು ಕಾರಣ ಎಂಬುದು ಮಾನ್ಯ ಸದಸ್ಯರಿಗೇ ಗೊತ್ತಿರಬಹುದು. ಕೆಲವು ರಾಜಕಾರಣ ಮತ್ತು ಇನ್ನು ಕೆಲವು ಕಾರಣ ಇರಬಹುದು. ಕಟ್ಟಡ ತೆಗೆದುಕೊಂಡಿರುವುದಕ್ಕೆ ಕಾರಣ ಏನು ಎಂಬುದನ್ನು ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು.—ಅವರು ಕೇಳುತ್ತಿರುವುದು ನೌಕರರ ಪ್ರಶ್ನೆ.

ಶ್ರೀ ಮುತ್ತಿನ ಪೆಂಡಿಮಠ.—ನಾನು ಕೇಳಿದ್ದು ರಿಮ್ಯಾಂಡ್ ಹೋಂನಲ್ಲಿ ಕೆಲಸ ಮಾಡುವವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿದ್ದೀರಾ ? ಪರಿಗಣಿಸಿದ್ದರೆ ಸರ್ಕಾರಿ ನೌಕರರಿಗೆ ಕೊಡುವಂತೆ ವೇತನವನ್ನು ನಿಗದಿ ಪಡಿಸಿದ್ದೀರಾ ? ನಿಗದಿಪಡಿಸದಿದ್ದರೆ ಕಾರಣವೇನು ?

ಶ್ರಮತಿ ಚಂದ್ರಪ್ರಭ ಅರಸು.—ಎಲ್ಲಿ ಅವರ ಆಗತ್ಯತೆ ಇದೆಯೋ ಅಲ್ಲಿ ಅವರನ್ನು ಬಳಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಯಾವರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನಾವು ತೆಗೆದು ಕೊಳ್ಳುತ್ತಿದ್ದೇವೆ.

ಶ್ರೀ ಮುತ್ತಿನ ಪೆಂಡಿಮಠ.—ಅವರಿಗೆ ಮೂರು ವರ್ಷಗಳಿಂದ ಪಗಾರ ಕೊಟ್ಟಿಲ್ಲ. ಅವರು ಹೇಗೆ ಜೀವನ ಮಾಡಬೇಕು ?

ಶ್ರೀಮತಿ ಚಂದ್ರಪ್ರಭ ಅರಸು.—ಅವರ ಸೇವೆಯನ್ನು ಯಾವರೀತಿ ಉಪಯೋಗಿಸಿಕೊಳ್ಳಬಹುದು ಎಂಬುದನ್ನು ಯೋಚನೆ ಮಾಡಿ ಕೈಗೊಳ್ಳುತಿದ್ದೇವೆ.

ವಿಷಯ :- ಮಣಿಪಾಲದಲ್ಲಿ ಗೃಹಮಂಡಲಿಯವರಿಂದ ಮನೆಗಳ ಹಂಚಿಕೆ

ಪ್ರ. 160 (92) ಡಾ. ವಿ. ಎಸ್. ಆಚಾರ್ಯ (ಉಡುಪಿ) ಮಾನ್ಯ ಕಾನೂನು, ಸಂಸದೀಯ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಕರ್ನಾಟಕ ಹೌಸಿಂಗ್ ಬೋರ್ಡಿನವರು ಮಣಿಪಾಲದಲ್ಲಿ ಕಡಿಮೆ, ಮಧ್ಯಮ ಮತ್ತು ಮೇಲಿನ ಆದಾಯದ ಗುಂಪಿನವರಿಗೆ ಮನೆ ಕೊಡುವ ಯೋಜನೆಗೆ ಸರಕಾರದವರು ಮಂಜೂರಾತಿ ಪಡೆದಿದ್ದಾರೆಯೇ :

ಆ. ಹಾಗಿದ್ದಲ್ಲಿ ಅರ್ಜಿದಾರರ ಪಟ್ಟಿ ಸಿದ್ಧವಿದೆಯೇ :

ಇ. 1980ರಲ್ಲಿ ಕಡಿಮೆ ಆದಾಯದ ಮನೆ ಬಗ್ಗೆ ಅರ್ಜಿದಾರರಿಂದ ತಲಾ ರೂ. 500 ರಂತೆ ಪಡೆದು ಅರ್ಜಿ ಪಡೆದ ನಂತರ ಈ ಬಗ್ಗೆ ಅವರಿಗೆ ಸೂಚನೆಯೇ ಹೋಗದಿರಲು ಕಾರಣಗಳೇನು ;

ಶ್ರಿ ಎ. ಲಕ್ಷ್ಮಿಸಾಗರ್ (ಕಾನೂನು ಸಂಸದೀಯ ಹಾಗೂ ವಸತಿ ಮಂತ್ರಿಗಳು):—

ಅ. ಹೌದು.

ಆ. ಸಿದ್ಧವಾಗುತ್ತಿದೆ.

ಇ. ಅಲ್ಪ ಆದಾಯದವರಿಗೆ ಮನೆ ನಿರ್ಮಾಪದ ಬಗ್ಗೆ ಇನ್ನೂ ಪರಿಶೀಲನೆ ನಡೆಯುತ್ತಿದೆ. ಆದ್ದರಿಂದ ಅವರಿಗೆ ಸೂಚನೆಗಳು ಕಳುಹಿಸಲಿಲ್ಲ.

ಶ್ರೀ ಕೆ. ರಾಮಭಟ್.—ಸ್ವಾಮಿ, ಆ ಪ್ರಶ್ನೆಗೆ ಉತ್ತರವಾಗಿ ಮನೆ ಕೊಡುವ ಯೋಜನೆಗೆ ಸರಕಾರದವರು ಮಂಜೂರಾತಿ ಪಡೆದಿದ್ದಾರೆಯೇ ಎಂಬುದಕ್ಕೆ 'ಹೌದು' ಎಂದು ಹೇಳಿದ್ದೀರಿ. ಯಾವಾಗ ಮಂಜೂರಾತಿಯನ್ನು ಕೊಡಲಾಗಿದೆ ? ಎರಡನೆಯದಾಗಿ, ಅರ್ಜಿದಾರರ ಪಟ್ಟಿ ಸಿದ್ಧವಾಗುತ್ತಿದೆ ಎಂದು ಹೇಳಿದ್ದೀರಿ. ಅದನ್ನು ಯಾವಾಗ ಮುಗಿಸುತ್ತೀರಿ ಎಂದು ಕೇಳಬಹುದಾ ?

ಶ್ರೀ ಎ. ಲಕ್ಷ್ಮಿಸಾಗರ್.—ಹುಡ್ಕೋ ನೆರವನ್ನು ಕೋರಿ ಫೆಬ್ರುವರಿ 1982ರಲ್ಲಿ ಅವರಿಗೆ ಕಳುಹಿಸಿ ಕೊಡಲಾಗಿತ್ತು. ಅದಾದನಂತರ ಅಲ್ಪಾದಾಯದ ಮನೆಗಳ ಬೆಲೆ ಚಾಸ್ತಿಯಾಗುತ್ತದೆ, ಅದನ್ನು ಕಡಿಮೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಅದರಂತೆ ಅಂದಾಜುಗಳನ್ನು ಮಾಡಬೇಕೆಂದು ಅವರು ನಮಗೆ ವಾಪಸ್ ಹಾಕಿದ್ದರಿಂದ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕಾಗಲಿಲ್ಲ. ಮಧ್ಯಮ ಆದಾಯದ ಮನೆಗಳಿಗೆ ಹುಡ್ಕೋ ಮಂಜೂರಾತಿ ದಿನಾಂಕ 4-4-1980ರಲ್ಲಿ ಸಿಕ್ಕಿದೆ. ಈ ರೀತಿ ರೀಕಾಸ್ಟ್ ಮಾಡಿ ಪ್ಲಾನ್ ಕೊಡಿ ಎಂದು ಹೇಳಿದ್ದಕ್ಕೋಸ್ಕರ ವಿಳಂಬವಾಗಿದೆ.

ಶ್ರೀ ಕೆ. ರಾಮಭಟ್.—'ಇ' ಪ್ರಶ್ನೆಗೆ ಉತ್ತರವಾಗಿ ಅಲ್ಪ ಆದಾಯದವರಿಗೆ ಮನೆ ನಿರ್ಮಾಣದ ಬಗ್ಗೆ ಇನ್ನೂ ಪರಿಶೀಲನೆ ನಡೆಯುತ್ತಿದೆ ಎಂದು ಹೇಳಿದ್ದೀರಿ. ಪರಿಶೀಲನೆ ಯಾವ ಹಂತದಲ್ಲಿದೆ, ಯಾವಾಗ ಮುಗಿಯುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಲಕ್ಷ್ಮಿಸಾಗರ್.—ಬೇಗ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಹಣ ಜಾಸ್ತಿ ಖರ್ಚಾಗುತ್ತದೆ, ಅಂತಿಮ ಬೆಲೆ ಕಡಿಮೆ ಮಾಡಬೇಕು, ಅದರಂತೆ ಸ್ಕೀಂ ಕಳುಹಿಸಿ ಎಂದು ಹುಡ್ಕೋದವರು ಹೇಳಿದ್ದಾರೆ, ಅವರಿಂದ ಹಣ ಬಂದವಂತರ ಮಾಡುತ್ತೇವೆ.

ವಿಷಯ :- ಬೆಂಗಳೂರಿನ ಸಾರಿಗೆ ಸೇವಾ ವ್ಯವಸ್ಥೆಯನ್ನು ಉತ್ತಮಪಡಿಸುವುದು

ಪ್ರ. 161 (110) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ) ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯನ್ನು ಉತ್ತಮ ಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು;

ಆ. ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಲು ಮತ್ತು ಬದಲಿ ವ್ಯವಸ್ಥೆ ಬಗ್ಗೆ ಸರ್ಕಾರದವರು ರಚಿಸಿದ ಸಮಿತಿಯ ಸಮೀಕ್ಷೆ ವರದಿ ಬಂದಿದೆಯೇ;

ಇ. ಈ ಸಮೀಕ್ಷೆ ವರದಿಯ ಶಿಫಾರಸ್ಸುಗಳೇನು ?

ಶ್ರೀ ಎಂ. ಪಿ. ಪ್ರಕಾಶ್, (ಮಾನ್ಯ ಸಾರಿಗೆ ರಾಜ್ಯ ಸಚಿವರು) :—

ಅ. ರಾಜ್ಯ ಸಾರಿಗೆ ಸಂಸ್ಥೆಯು ಬೆಂಗಳೂರು ನಗರ ಸಾರಿಗೆ ವಿಭಾಗಕ್ಕೆ ಒದಗಿಸುವ ಬಸ್ಸುಗಳನ್ನು 1980-81ರಲ್ಲಿ 656 ಬಸ್ಸುಗಳಿಂದ 1981-82ರಲ್ಲಿ 904ಕ್ಕೆ ಹೆಚ್ಚಿಸಿವೆ. 1983-84ರ ಯೋಜನೆಯಲ್ಲಿ 212 ಬಸ್ಸುಗಳನ್ನು ಈ ವಿಭಾಗಕ್ಕೆ ಹೆಚ್ಚಿಗೆ ಸೇರಿಸುವ ಯೋಜನೆಯು ಸೇರಿದೆ,

ಆ. ಬಂದಿದೆ.

ಇ. 1. ಈ ಸಮೀಕ್ಷಾ ಸಮಿತಿಯ ವರದಿಯಲ್ಲಿ ಮುಂದಿನ 20 ವರ್ಷಗಳಿಗೆ ಅವಶ್ಯಕವಿರುವ ಸಾರಿಗೆ ವ್ಯವಸ್ಥೆಗಾಗಿ ಯೋಜನೆಯೊಂದನ್ನು ರೂಪಿಸಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಕ್ರಿ. ಶ. 2000ರ ಇಸವಿಯ ಹೊತ್ತಿಗೆ 117.66 ಕೋಟಿ ರೂಗಳ ವೆಚ್ಚದಲ್ಲಿ 3000 ಷೆಡ್ಯೂಲ್‌ಗಳನ್ನು ಹೊಂದುವ ಯೋಜನೆಯೊಂದಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸಲು ನಿರ್ಧರಿಸಿದೆ.

2. ಒಳವೃತ್ತಗಳು, ಪಾದಚಾರಿಗಳು ಸಂಚರಿಸುವ ಉಪ ಮಾರ್ಗಗಳನ್ನು ಈಗಿರುವ ಮಾರ್ಗಗಳಿಂದ ಬೇರ್ಪಡಿಸುವಿಕೆಗೆ ಇತರೆ ಖರ್ಚುಗಳಿಗಾಗಿ 120 ಕೋಟಿ ರೂಗಳ ಅಂದಾಜು ಮಾಡಲಾಗಿದೆ.

3. ವೃತ್ತಾಕಾರದ ರಸ್ತೆಗಳು ಸುರಂಗ ರೈಲ್ವೆ ಮಾರ್ಗಗಳು, ಇತರೆ ಮಾರ್ಗಗಳನ್ನು ನಿರ್ಮಿಸಲು ಯೋಚಿಸಲಾಗಿದೆ.

4. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೆಂಗಳೂರು ನಗರ ಸಾರಿಗೆಯನ್ನು ಬೇರ್ಪಡಿಸಿ ಇದಕ್ಕಾಗುವ ವೆಚ್ಚವನ್ನು ಸಹಾಯ ಧನವೆಂದು ಸರ್ಕಾರ ಬಿ. ಡಿ. ಎ, ಮತ್ತು ಬ, ಸಿ. ಸಿ. ಗಳಿಂದ ಪಡೆಯುವಂತೆ ಮಾಡುವುದು.

5. ವಿಶ್ವ ಬ್ಯಾಂಕಿನಿಂದ ನಿಧಿಯ ನೆರವನ್ನು ಪಡೆಯಲು ಪ್ರಯತ್ನ ಮಾಡುವುದು.

ಶ್ರೀ ಪಿ. ರಾಮದೇವ್.—ಇದರಲ್ಲಿ ಎರಡು ವಿಚಾರಗಳಿವೆ. ಮೊದಲನೆಯದಾಗಿ, ರಷ್ ಅವರ್‌ಗಳಲ್ಲಿ ಬಸ್ಸುಗಳ ತೂಂದರೆಯನ್ನು ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೂಂಡು ಹೆಚ್ಚಿನ ಸೌಲಭ್ಯವನ್ನೊದಗಿಸಲು ಬೆಂಗಳೂರು ನಗರ ಸಾರಿಗೆಯವರು ಏನು ಮಾಡಿದ್ದಾರೆ ? ಇದಕ್ಕೆ ಕೇಂದ್ರಸರ್ಕಾರ ಮತ್ತು ಯೋಜನಾ ಆಯೋಗದಿಂದ ಹಣ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೀರಾ;

ಶ್ರೀ ಎಂ. ಪಿ. ಪ್ರಕಾಶ್,—ಸನ್ಮಾನ್ಯ ಅಧ್ಯಕ್ಷರೆ, ಹೆಚ್ಚಿನ ಜನಸಾಂದ್ರತೆ ಮತ್ತು ಒತ್ತಡ ಇರತಕ್ಕ ಕಡೆಗಳಲ್ಲಿ ಫ್ಯಾಕ್ಟರಿಗಾಗಿ ಕೊಟ್ಟಿರತಕ್ಕ ಬಸ್ಸುಗಳನ್ನು ಮತ್ತೆ ಹಾಕಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಈ ವರ್ಷದಲ್ಲಿ 200 ಹೊಸ ಬಸ್ಸುಗಳನ್ನು ಹಾಕುವ ಯೋಚನೆ ಇದೆ. ಯೋಜನಾ ಆಯೋ